ಶಿವಮೊಗ್ಗ ಜಿಲ್ಲೆಯಲ್ಲಿ ಹನಿ ನೀರಾವರಿ ಯೋಜನೆಯಡಿ ಸಹಾಯಧನ ಪಾವತಿಸಲು ಬಾಕಿ ಇರುವುದು.

853 (1225) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಹನಿ ನೀರಾವರಿ ಅಳವಡಿಸಿಕೊಂಡು ಸಹಾಯ ನೀಡದೇ ಬಾಕಿ ಇರುವ ಪ್ರಕರಣಗಳೆಷ್ಟು; (ತಾಲ್ಲೂಕುವಾರು ವಿವರ ನೀಡುವುದು)

ಆ) ಸಹಾಯಧನ ಬಿಡುಗಡೆಗೆ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು? ವರ್ಷವಾರು ಮತ್ತು ತಾಲ್ಲೂಕುವಾರು ವಿವರ ನೀಡುವುದು;

ಇ) ಈ ಅನುದಾನವನ್ನು ಸರ್ಕಾರ ಯಾವಾಗ ಬಿಡುಗಡೆ ಮಾಡುತ್ತದೆ?

ಶ್ರೀ ಅಲ್ಲಂ ವೀರಭದ್ರಪ್ಪ (ತೋಟಗಾರಿಕೆ ರಾಜ್ಯ ಸಚಿವರು) :

ಅ) 1999-2000ನೇ ಸಾಲಿಗೆ 806 ಪ್ರಕರಣಗಳು ಬಾಕಿ ಇದ್ದವು.

ತಾಲ್ಲೂಕುವಾರು ವಿವರ ಕೆಳಕಂಡಂತಿದೆ.

ಶಿವಮೊಗ್ಗ	-	205
ಭದ್ರಾವತಿ	-	132
ಶಿಕಾರಿಪುರ	-	61
ಸೊರಬ	-	93
ಸಾಗರ	-	57
ಹೊಸನಗರ	-	159
ತೀರ್ಥಹಳ್ಳಿ	-	99

ಆ) ಈಗಾಗಲೇ ರೂ. 90.9 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ವಿವರಗಳು (ಅ) ನಂತೆ

ಇ) ಉದ್ಭವಿಸುವುದಿಲ್ಲ.

ಎ.ಪಿ.ಎಂ.ಸಿ.ಯಲ್ಲಿ ಆವರ್ತ ನಿಧಿಯನ್ನು ಸ್ಥಾಪಿಸುವುದು

855(1229) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ರೈತರು ಬೆಳೆದ ಬೆಳೆಯ ಬೆಲೆ ಕುಸಿತದಿಂದ ಪಾರು ಮಾಡುವ ಒಗ್ಗೆ ಆವರ್ತ ನಿಧಿಯನ್ನು ಸ್ಥಾಪಿಸಲಾಗಿದೆಯೇ?

ಆ) ಇದಕ್ಕಾಗಿ ಇದುವರೆವಿಗೆ ಕ್ರೋಢೀಕರಿಸಲಾದ ಮೊತ್ತವೆಷ್ಟು;

ಇ) ಇದುವರೆವಿಗೂ ಈ ಆವರ್ತ ನಿಧಿಯನ್ನು ಉಪಯೋಗಿಸಿ ಎಷ್ಟು ಮೊತ್ತದ ಬೆಳೆಯನ್ನು ಖರೀದಿಸಲಾಗಿದೆ. (ಜಿಲ್ಲಾವಾರು ವಿವರ ನೀಡುವುದು)

ಶ್ರೀ ಆರ್. ಬಿ. ತಿಮ್ಮಾಪುರ್ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಹೌದು, ಆವರ್ತ ನಿಧಿಯನ್ನು ಸ್ಥಾಪಿಸಲಾಗಿದೆ.

ಆ) ಕ್ರೋಢೀಕರಿಸಲಾಗಿರುವ ಒಟ್ಟು ಮೊತ್ತ ರೂ. 32, 45, 67,000-00

ಇ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಂದ ಹಾಗೂ ಕರ್ನಾಟಕ ಸರ್ಕಾರದಿಂದ ಕ್ರೋಢೀಕರಿಸಲಾಗಿದೆ.

ಈ) ಇದುವರೆಗೆ ರೂ. 7, 93,00,000-00 ಗಳ ಮೊತ್ತದಲ್ಲಿ ಆಲೂಗೆಡ್ಡೆ ಹಾಗೂ ತೊಗರಿಯನ್ನು ಖರೀದಿಸಲಾಗಿದೆ.

ಆಲೂಗೆಡ್ಡೆಯನ್ನು ಧಾರವಾಡ, ಜಿಲ್ಲೆಯಿಂದ 93,621.20 ಕ್ವಿಂಟಾಲ್‌ಗಳಲ್ಲಿ ರೂ. 4. 17 ಕೋಟಿಗಳ ಮೌಲ್ಯದಲ್ಲಿ ಹಾಗೂ ಬೆಳಗಾಂ ಜಿಲ್ಲೆಯಿಂದ 18,749.50 ಕ್ವಿಂಟಾಲ್‌ಗಳಲ್ಲಿ ರೂ. 83.00 ಲಕ್ಷಗಳ ಮೌಲ್ಯ 286. 50 ಕ್ವಿಂಟಾಲ್‌ಗಳನ್ನು ರೂ. 1.00 ಲಕ್ಷಗಳ ಮೌಲ್ಯದಲ್ಲಿ ಖರೀದಿಸಲಾಗಿದೆ.

ಗುಲ್ಬರ್ಗ ಜಿಲ್ಲೆಯಿಂದ ತೊಗರಿಯನ್ನು 16,405.00ಕ್ವಿಂಟಾಲ್‌ಗಳಲ್ಲಿ ರೂ. 2.92 ಕೋಟಿಗಳ ಮೌಲ್ಯದಲ್ಲಿ ಖರೀದಿಸಲಾಗಿದೆ.

ಮುಲ್ಕಿ ಮೂಡಬಿದ್ರೆ ಕ್ಷೇತ್ರದ ಕೊಳಚೆ ನಿರ್ಮೂಲನಾ ಕಾರ್ಯಕ್ರಮ

858 (1348) ಶ್ರೀ ಅಭಯಚಂದ್ರ ಕೆ. (ಮೂಡಬಿದ್ರೆ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಲ್ಕಿ ಮೂಡಬಿದ್ರೆ ಕ್ಷೇತ್ರದ ಕಾರ್ನಾಡುನಲ್ಲಿರುವ ಲಿಂಗಪ್ಪಯ್ಯ ಕಾಡು ಕೊಳಚೆ ಪ್ರದೇಶ ಎಂಬುದಾಗಿ ಪಂಜೂರುಗಿರುವುದು (ಕಾರ್ನಾಡು ಸದಾಶಿವರಾವ್ ನಗರ ಚಾಲ್ತಿ ಸಾಲಿನಲ್ಲಿ ಸರ್ಕಾರದ ವಿಶೇಷ ಕೊಳಚೆ ನಿರ್ಮೂಲನ ಕಾರ್ಯಕ್ರಮ ಯೋಜನೆಯಲ್ಲಿ ಕೈಬಿಡಲು ಕಾರಣವೇನು?

ಆ) ಗ್ರಾಮೀಣ ಪ್ರದೇಶದ ಕೊಳಚೆ ನಿರ್ಮೂಲನ ಅತೀ ಅವಶ್ಯಕವಾಗಿರುವುದರಿಂದ ಲಿಂಗಪ್ಪಯ್ಯ ಕೊಳಚೆ ಪ್ರದೇಶವನ್ನು ಹೊಸ ಯೋಜನೆಯಲ್ಲಿ ಸೇರಿಸಲಾಗಿದೆಯೇ;

ಇ) ಹೊಸ ಯೋಜನೆಯಲ್ಲಿ ಕೊಳಚೆ ನಿರ್ಮೂಲನ ಬಗ್ಗೆ ಎಷ್ಟು ಹಣ ಒದಗಿಸಲಾಗಿದೆ?

ಈ) ರಾಜ್ಯದ ಬಿಜಾಪುರ, ಗುಲ್ಬರ್ಗಾ, ಧಾರವಾಡ, ಜಮಖಂಡಿ, ಬೀದರ್ ಪ್ರದೇಶದ ಸುಮಾರು 10,000 ಕೂಲಿ ಕಾರ್ಮಿಕರ 2000 ಜೊಕ್ಕ ಮನೆಯಿರುವ ಅಲ್ಲದೆ MCF ಮಂಗಳೂರು NMPT ಮತ್ತು MRPL ಕೆಲಸ ಮಾಡುತ್ತಿರುವ ದಿನಕೂಲಿಕಾರರು ಕೊಳಚೆ ಪ್ರದೇಶದಲ್ಲಿ ವಾಸವಾಗಿದ್ದು, ಸರ್ಕಾರ ಹೊಸ ಕೊಳಚೆ ನಿರ್ಮೂನಲ ಯೋಜನೆಯಲ್ಲಿ ಇವರುಗಳಿಗೆ ಮಾಡಲಾಗುವುದೆ?